ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು) :

ಅ) ಶಾಸಕರುಗಳಿಗೆ ಅವರ ಕ್ಷೇತ್ರಗಳಲ್ಲಿ ಪ್ರವಾಸ ಮಾಡಲು ವಾಹನ ಸೌಲಭ್ಯವನ್ನು ನೀಡುವ ಬಗ್ಗೆ ವಿಧಾನ ಮಂಡಲದಿಂದ ಪ್ರಸ್ತಾವನೆಯು ಬಂದಿದ್ದು. ಸಂಪನ್ಮೂಲಗಳ ಕೊರತೆಯಿಂದ ಈ ಪ್ರಸ್ತಾವನೆಯನ್ನು ಸರ್ಕಾರವು ಒಪ್ಪಿರುವುದಿಲ್ಲ.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಬಸವ ಕಲ್ಯಾಣ ಕ್ಷೇತ್ರದಲ್ಲಿರುವ ಸಣ್ಣ ಕೆರೆಗಳು

1073 (1327) - ಶ್ರೀ ಎಂ.ಜಿ. ಮುಳೆ (ಬಸವಕಲ್ಯಾಣ) ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವಕಲ್ಯಾಣ ಮತಕ್ಷೇತ್ರದಲ್ಲಿ ಬರುವ ಸಣ್ಣ ಕೆರೆಗಳ ಸಂಖ್ಯೆ ಎಷ್ಟು (ಗ್ರಾಮಾವಾರು ಅಂಕಿ ಅಂಶಗಳನ್ನು ಒದಗಿಸುವುದು);

ಆ) ಈ ಕೆರೆಗಳನ್ನು ನಿರ್ಮಿಸುವ ಸಂಬಂಧದಲ್ಲಿ ಪ್ರತಿ ಕೆರೆಯಿಂದ ಎಷ್ಟು ಎಕರೆ ಪ್ರದೇಶಕ್ಕೆ ನೀರಾವರಿ ಒದಗಿಸುವ ಗುರಿಯನ್ನು ಹೊಂದಲಾಗಿತ್ತು (ಪೂರ್ಣ ವಿರವಗಳನ್ನು ಕರೆವಾರು ಅಂಕಿಂಶಗಳನ್ನು ಒದಗಿಸುವುದು);

ಇ) ಈ ಕೆರೆಗಳಿಂದ ಎಷ್ಟು ಎಕರೆಗೆ ನೀರಾವರಿ ಸೌಲಭ್ಯ ದೊರಕುತ್ತಿದೆ;

ಈ) ಈ ಕೆರೆಗಳಿಂದ ನಿಗದಿತ ಪ್ರಮಾಣಕ್ಕಿಂತ ಕಡಿಮೆ ಪ್ರಮಾಣದಲ್ಲಿ ನೀರಾವರಿ ಸೌಲಭ್ಯ ದೊರೆಯುತ್ತಿರುವುದು ನಿಜವಲ್ಲವೇ;

ಉ) ಇದಕ್ಕೆ ಕಾರಣಗಳೇನು? ಈ ಕೆರೆಗಳ ಸಾಮರ್ಥ್ಯವನ್ನು ಹೆಚ್ಚಿಸಲು ಸರ್ಕಾರದ ಮುಂದಿರುವ ಕಾರ್ಯಕ್ರಮಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು) :

ಅ) ಬಸವಕಲ್ಯಾಣ ಮತಕ್ಷೇತ್ರದಲ್ಲಿ ಒಟ್ಟು 10 ಸಣ್ಣ ನೀರಾವರಿ ಕೆರೆ ಅಸ್ತಿತ್ವದಲ್ಲಿವೆ. ಗ್ರಾಮವಾರು ವಿರರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಸದರಿ ಕೆರೆಗಳಿಂದ ಒಟ್ಟು ವಿನ್ಯಾಸದಂತೆ 5418.80 ಎಕರೆ ಭೂಮಿಗೆ ನೀರಾವರಿ ಸೌಲಭ್ಯ ಒದಗಿಸಬಹುದಾಗಿದೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಸದರಿ ಕೆರೆಗಳಿಂದ ಸಧ್ಯ 290.35 ಎಕರೆ ಭೂಮಿಗೆ ನೀರಾವರಿ ಸೌಲಭ್ಯ ದೊರಕಿಸಲಾಗುತ್ತಿದೆ.

ಈ) ಹೌದು.

ಉ) ನೀರಾವರಿ ಕ್ಷೇತ್ರ ಕಡಿಮೆ ಆಗಿರುವುದಕ್ಕೆ ಕಾರಣಗಳನ್ನು ಅನುಬಂಧದಲ್ಲಿ ವಿವರಿಸಲಾಗಿದೆ.

ಅನುಬಂಧ

ಕ್ರ.ಸಂ	ಕೆರೆಗಳ ಹೆಸರು	ವಿನ್ಯಾಸದಂತೆ ಅಚ್ಚುಕಟ್ಟು ಹೆಕ್ಟೇರುಗಳಲ್ಲಿ	ಕಳೆದ ಮೂರು ವರ್ಷಗಳಲ್ಲಿ ಆಗಿರುವ ನೀರಾವರಿ ಕ್ಷೇತ್ರ ಹೆಕ್ಟೇರುಗಳಲ್ಲಿ	ನೀರಾವರಿ ಕಡಿಮೆ ಆಗಿರುವುದಕ್ಕೆ ಕಾರಣಗಳು
1	2	3	4	5
1)	ಚಿಕ್ಕನಾಗಾಂವ್	259	19.41	1) ಕಡಿಮೆ ಮಳೆಯ ಪ್ರಮಾಣ
2)	ಬಿಟ್ ಬಾಲಕುಂದಾ	1060	15.52	2) ಕಾಲುವೆಗಳು ಸಮರ್ಪಕ ಸ್ಥಿತಿಯಲ್ಲಿ ತರಬೇಕಾಗಿದೆ.
3)	ನಾರಾಯಣಪೂರ	77	30.36	
4)	ದರಖಾಪೂರ	77	14.08	
5)	ಕಲಖೋರಾ	122	38.50	
6)	ತ್ರಿಪರಾಂತ	144	-	
7)	ಅಟ್ಟೂರ	76	1.21	
8)	ಅಲಗೊಂಡ	170	-	
9)	ಹೊನ್ನಳ್ಳಿ	100	-	
10)	ಸಿರಗಾಪೂರ	100	-	
		2185 ಹೆಕ್ಟೇರ್	117.08 ಹೆಕ್ಟೇರ್	
		5418.80 ಎಕರೆ	290.35 ಎಕರೆ	